ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

**ಸ್ಪೆಷಲ್ ಕೇಸ್ ನಂಬ್ರ: 11/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ದಿನೇಶ್ ಶೆಟ್ಟಿ | ಚಾಸಾ: 10 |
| ತಂದೆಯ ಹೆಸರು | : | ದಿ. ಆನಂದ ಶೆಟ್ಟಿ | ಫ್ರಾಸಾ: 6 |
| ಪ್ರಾಯ | : | 63 ವರ್ಷ | ದಿನಾಂಕ: 18.11.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ಪೋಸ್ಟ್‌ಮನ್ | |
| ವಾಸಸ್ಥಳ | : | ಕೇರಾಫ್ ಜಾನ್ ಡಿಸೋಜಾ, ಪಯಸ್ವಿನಿ ಕಾಂಪ್ಲೆಕ್ಸ್, ಮುಗೇರ್ ದ್ವಾರದ ಬಳಿ, ಜಪ್ಪಿನಮೊಗರು, ಮಂಗಳೂರು | |

ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಅಭಿಯೋಜಕರಿಂದ:

ನಾನು 2005 ರಿಂದ 2023 ರವರೆಗೆ ಕಂಕನಾಡಿ ಪೋಸ್ಟ್ ಆಫೀಸ್ ನಲ್ಲಿ ಪೋಸ್ಟ್ ಮನ್ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ನನ್ನದು 14 ನೇ ಬೀಟ್ ವ್ಯಾಪ್ತಿ ಇದ್ದು ಅದರಲ್ಲಿ ಸೈಂಟ್ ಆಗ್ನಿಸ್ ನಿಂದ ಮಲ್ಲಿಕಟ್ಟೆ, ಕದ್ರಿ ದೇವಸ್ಥಾನ, ಜೋಗಿ ಮಠಯಿಂದ ಜಾರ್ಜ್ ಮಾರ್ಟಿಸ್ ರಸ್ತೆ ಕದ್ರಿ ಕೈ ಬಟ್ಟಲು ವರೆಗೆ ಇರುತ್ತದೆ.

2. ದಿ. 10.06.2021 ರಂದು ಅಜಿನಾಸ್ ಎಂಬಾತನಿಗೆ A-2, ಸಿಟಾಡೆಲ್ ಅಪಾರ್ಟ್‌ಮೆಂಟ್, ಕದ್ರಿ ದೇವಸ್ಥಾನ ರಸ್ತೆ, ಮಂಗಳೂರು ಈ ವಿಳಾಸಕ್ಕೆ ಒಂದು ನೊಂದಣಿ ಅಂಚೆ ಪಾರ್ಸೆಲ್ ಬಂದಿದ್ದು ಅದನ್ನು ನಾನು ನಮ್ಮ ಅಂಚೆ ಕಚೇರಿಯಿಂದ ತೆಗೆದುಕೊಂಡು ಹೋದಾಗ ಸದರಿ ಅಪಾರ್ಟ್‌ಮೆಂಟ್ ನಲ್ಲಿಯ ಪ್ಲಾಟ್ ನ ಬಾಗಿಲನ್ನು ಲಾಕ್ ಮಾಡಿಲಾಗಿತ್ತು. ಆಗ ನಾನು ಕೆಳಗೆ ಬಂದು ಸೆಕ್ಯೂರಿಟಿ ಅವರನ್ನು ವಿಚಾರಿಸಿದಾಗ ಸದರಿ ಅಜಿನಾಸ್ ಈತನು

ಬರುವುದು ತಡವಾಗುತ್ತದೆ ಎಂದು ಹೇಳಿದ್ದು ಆಗ ನಾನು ಆತನಿಗೆ ಮಾಹಿತಿಯನ್ನು ನೀಡಿರುತ್ತೇನೆ.

3. ನಾನು ಇನ್ನು ಅಲ್ಲೇ ಇದ್ದಾಗ ಬೆಳಿಗ್ಗೆ 10.45 ಗಂಟೆಗೆ ಸೆಕ್ಯೂರಿಟಿಗೆ ಕರೆ ಬಂದಿದ್ದು ಆಗ ಸೆಕ್ಯೂರಿಟಿಯೂ ಸದರಿ ಅಜಿನಾಸ್ ಫೋನ್ ಮಾಡಿದ್ದು ಆತನು ಸಧ್ಯದಲ್ಲಿ ಬರುವುದಾಗಿ ಹೇಳಿರುತ್ತಾನೆ. ಫೋನ್ ಮಾಡಿದ 10–20 ನಿಮಿಷಗಳ ನಂತರ ಸದರಿ ಅಜಿನಾಸ್ ಬಂದಿದ್ದು ಆತನ ಕೈಗೆ ನಾನು ನೊಂದಣಿ ಅಂಚೆ ಪಾರ್ಸೆಲ್ ನ್ನು ಕೊಟ್ಟಿರುತ್ತೇನೆ. ಸದರಿ ಅಜಿನಾಸ್ ನ್ಯಾಯಾಲಯದ ವಿ.ಸಿ ಯಲ್ಲಿ ಕಾಣಿಸುವ 1 ನೇ ಆರೋಪಿ ಆಗಿರುತ್ತಾನೆ.

4. ಪಾರ್ಸಲ್ ನ್ನು ಪಡೆದುಕೊಂಡ ನಂತರ 1 ನೇ ಆರೋಪಿಯು ಡಿಲಿವೆರಿ ನೋಟ್ ಗೆ ಸಹಿ ಮಾಡಿಕೊಟ್ಟಿರುತ್ತಾನೆ. ಸದರಿ ಡಿಲಿವರಿ ನೋಟ್ ನ್ನು ನೋಡುತ್ತಿದ್ದು ಅದನ್ನು ನಿಪಿ–16 ಎಂದೂ ಸಂಬಂಧಪಟ್ಟ ನಮೂದನ್ನು ನಿಪಿ–16(ಎ) ಎಂದು ಗುರುತಿಸಲಾಯಿತು.

5. 1 ನೇ ಆರೋಪಿಗೆ ಪಾರ್ಸಲ್ ನಂಬರ್ LB148954145FR ಇರುತ್ತದೆ. ಸದರಿ ಪಾರ್ಸೆಲ್ ಫ್ರಾನ್ಸ್ ದೇಶದಿಂದ ಬಂದಿರುತ್ತದೆ. ಸುಮಾರು 20 ದಿನಗಳ ನಂತರ ಕದ್ರಿ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿ 1 ನೇ ಆರೋಪಿಯ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆಗ 1 ನೇ ಆರೋಪಿಯ ಫೊಟೋವನ್ನು ಪೊಲೀಸರು ನನಗೆ ತೋರಿಸಿದ್ದು ನಾನು ಆತನಿಗೆ ದಿ. 10.06.2021 ರಂದು ಒಂದು ಪಾರ್ಸೆಲ್ ನ್ನು ಕೊಟ್ಟಿರುವುದಾಗಿ ಹೇಳಿರುತ್ತೇನೆ. ಆಗ ಪೊಲೀಸರು ಪಾರ್ಸಲ್ ನಂಬರ್ LB148954145FR ನ್ನು ನನಗೆ ತೋರಿಸಿದ್ದು ಅದನ್ನು ನಾನು ಗುರುತಿಸಿ ಅದನ್ನೇ 1 ನೇ ಆರೋಪಿಗೆ ತಲುಪಿಸಿರುವುದಾಗಿ ಹೇಳಿರುತ್ತೇನೆ.

6. ನಾನು 1 ನೇ ಆರೋಪಿಗೆ ಡೆಲಿವರಿ ಮಾಡಿದ ಪಾರ್ಸೆಲ್ ನ ಕವರ್ ನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–8 ಎಂದು ಗುರುತಿಸಲಾಗಿರುತ್ತದೆ. ಆಗ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆಯನ್ನು ತೆಗೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ವಿ.ಆರ್.ಎ, ವಕೀಲರಿಂದಃ**

7. ನಾನು ಯಾವುದೇ ಪಾರ್ಸಲ್ ನ್ನು 1 ನೇ ಆರೋಪಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ
(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.